ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ

ಮೈಸೂರು ದಸರಾ ಉತ್ಸವದ ಖಾಯಂ ಸಮಿತಿಯ ಬಗ್ಗೆ

೭೯ (೩೬೬) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮೈಸೂರು ನಗರ ದಸರಾ ಮಹೋತ್ಸವ ಮತ್ತು ವಸ್ತು ಪ್ರದರ್ಶನದ ವ್ಯವಸ್ಥೆಗೆ ಖಾಯಂ ಸಮಿತಿಯೊಂದನ್ನು ರಚಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ನವ ದೆಹಲಿಯ ಟ್ರೇಡ್ ಫೇರ್ ಅಥಾರಿಟಿ ಮಾದರಿಯಲ್ಲಿಯೇ ಒಂದು ಪ್ರಾಧಿಕಾರವನ್ನು ರಚಿಸುವ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

ಬೆಳ್ತಂಗಡಿಯಲ್ಲಿ ೧೯೮೬ರಲ್ಲಿ ನಡೆದ ಕೋಮುಗಲಭೆ ಬಗ್ಗೆ

೮೦ (೧೮೨) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಕೋಮು ಗಲಭೆ ನಡೆದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಗಲಭೆಗೆ ಕಾರಣಗಳೇನು ; ಹಾಗೂ ಸದರಿ ಗಲಭೆಯಲ್ಲಿ ಜೀವ ಹಾನಿಯಾದವರ ಸಂಖ್ಯೆ ಎಷ್ಟು ?

ಇ) ಈ ಗಲಭೆಗಳಿಗೆ ಕಾರಣರಾದವರ ಮೇಲೆ ಸರಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಬಂದಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಿತ್ತಬಾಗಿಲು ಗ್ರಾಮದ ಬಾರಂದ ಲೋಕಯ್ಯ ಯಾನೆ ನೋಣಯ್ಯ ಮತ್ತು ಆತನವರೊಡ ಇವರುಗಳು ಸ್ಥಳೀಯ ಮುಸ್ಲಿಮರ ಪ್ರೇರಣೆಯಿಂದ ಕೇರಳಕ್ಕೆ ಹೋಗಿ ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದಿದ ಬಗ್ಗೆ ಹಿಂದು ಕ್ರಿಯಾ ಸಮಿತಿಯವರು ದಿನಾಂಕ ೨೩-೮-೧೯೮೬ರಂದು ಬೆಳ್ತಂಗಡಿ ತಾಲೂಕು ಬಂದ್‌ಗೆ ಕರೆಕೊಟ್ಟರು. ಮುಸ್ಲಿಮರು ಬಂದ್ ವಿರುದ್ಧವಾಗಿ ಅಂಗಡಿಗಳನ್ನು ತೆರೆಯಲು ಪ್ರಯತ್ನಿಸಿದರು. ಹಿಂದುಗಳು ಇದನ್ನು ಪ್ರತಿಭಟಿಸಿದಾಗ ಗಲಭೆಗೆ ಕಾರಣವಾಯಿತು. ಈ ಘಟನೆಯಲ್ಲಿ ೨೫ ಮಂದಿ ಮುಸ್ಲಿಮರು, ೬ ಜನ ಹಿಂದುಗಳು ಗಾಯಗೊಂಡರು ಯಾರೂ ಮೃತಪಟ್ಟಿಲ್ಲ.

ಇ) ಈ ಗಲಭೆಗೆ ಸಂಬಂಧಪಟ್ಟಂತೆ ಬೆಳ್ತಂಗಡಿ ಪೋಲೀಸು ಠಾಣೆಯಲ್ಲಿ ಒಟ್ಟು ೪೨ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ೧೭೬ ಮಂದಿ ಹಿಂದುಗಳ ಮತ್ತು ೨೧ ಮಂದಿ ಮುಸ್ಲಿಮರ ಮೇಲೆ ಮೊಕದ್ದಮೆ ಹೂಡಲಾಗಿದೆ.